> ಕೃಷಿ ವಿವಿ ಹಾಗೂ ಕೃಷಿ ವಿಜ್ಞಾನಿಗಳು ರೈತರ ನೆರವಿಗೆ ಮುಂದಾಗಬೇಕು. ಆ ಮೂಲಕ ಸಂಶೋಧನಾ ಕೇಂದ್ರಗಳ ಕಾರ್ಯ ಮತ್ತು ನಿಮ್ಮ ಅರ್ಹತೆ ಮತ್ತು ಪ್ರಯತ್ನ ಸಮಾಜಕ್ಕೆ ತಿಳಿಯುವಂತಾಗಬೇಕು. ಕೃಷಿ ವಿಜ್ಞಾನಿಗಳು ಇಂಥ ಸಮಸ್ಯೆ ಉಲ್ಬಣಗೊಳ್ಳುವ ಮುನ್ನವೇ ಅಗತ್ಯ ಕ್ರಮ ಕೈಗೊಳ್ಳುವ ಅಗತ್ಯವಿದೆ
>
> • **ಬಿ.ವೈ.ರಾಘವೇಂದ್ರ**, ಸಂಸದ

ಎಲೆಚುಕ್ಕಿ ರೋಗ ಹಿನ್ನೆಲೆ ಆತ್ಮಸ್ಥೈರ್ಯ ಕಳೆದುಕೊಳ್ಳಬೇಡಿ: ಆರಗ ಜ್ಞಾನೇಂದ್ರ

ಗಿಳಿಗಿನಮನೆ ಮಂಜುನಾಥರ ಅಡಕೆ ತೋಟದಲ್ಲಿ ಎಲೆಚುಕ್ಕಿ ರೋಗ ಕುರಿತು ಕಾರ್ಯಾಗಾರ

• **ಕನ್ನಡಪ್ರಭವಾರ್ತೆ** ತೀರ್ಥಹಳ್ಳಿ

ಆಗುಂಬೆ ಸಮಿಪದ ಗಿಳಿಗಿನಮನೆ ಮಂಜುನಾಥರ ಅಡಕೆ ತೋಟದಲ್ಲಿ ಅಡಕೆ ಮರಗಳಿಗೆ ತಗುಲಿರುವ ಎಲೆಚುಕ್ಕಿ ರೋಗದ ಕುರಿತಂತೆ ಶನಿವಾರ ಕಾರ್ಯಾಗಾರ ನಡೆಯಿತು.

ಸಾಂಪ್ರದಾಯಿಕವಾಗಿ ಅಡಕೆಯನ್ನು ಬೆಳೆಯುತ್ತಿದ್ದ ಬೆಳೆಗಾರರಿಗೆ ಒಮ್ಮೆಲೇ ಎದುರಾಗಿರುವ ಎಲೆಚುಕ್ಕಿ ರೋಗದ ಕಠಿಣ ಸವಾಲನ್ನು ಎದುರಿಸುವಲ್ಲಿ ಬೆಳೆಗಾರರು ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು. ನಿಮ್ಮ ನೆರವಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯಹಸ್ತ ಸದಾ ಸಿದ್ಧ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಆಗುಂಬೆ ಸಮಿಪದ ಗಿಳಿಗಿನಮನೆ ಮಂಜುನಾಥರ ಅಡಕೆ ತೋಟದಲ್ಲಿ ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯ, ಮತ್ತು ತೋಟಗಾರಿಕೆ ಇಲಾಖೆ ಸಹಯೋಗದೊಂದಿಗೆ ಅಡಕೆ ಮರಗಳಿಗೆ ತಗುಲಿರುವ ಎಲೆಚುಕ್ಕಿ ರೋಗದ ಕುರಿತಂತೆ ಶನಿವಾರ ನಡೆದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಈ ಭಾಗದಲ್ಲಿ ಉದ್ಭವವಾಗಿರುವ ದಾರುಣ ಸ್ಥಿತಿ ಬಗ್ಗೆ ಮುಖ್ಯಮಂತ್ರಿ ಅವರಿಗೆ ಮನವರಿಕೆ ಮಾಡಲಾಗಿದೆ. ಸಾಧ್ಯವಾದರೆ ಅವರನ್ನೇ ಇಲ್ಲಿಗೆ ಕರೆತರುವ ಪ್ರಯತ್ನವನ್ನೂ ಮಾಡಲಾಗುವುದು ಎಂದೂ ಭರವಸೆ ನೀಡಿದರು.

ಕೃಷಿ ವಿಜ್ಞಾನಿಗಳು ನೆರವಾಗಲಿ: ಸಂಸದ ಬಿ.ವೈ. ರಾಘವೇಂದ್ರ ಅವರು ಅಡಕೆ ಬೆಳೆ ಕೈಪಿಡಿ ಬಿಡುಗಡೆಗೊಳಿಸಿ ಮಾತನಾಡಿ, ಮಲೆನಾಡು ಭಾಗದ ರೈತರ ಬದುಕಿನ ಭಾಗವಾಗಿರುವ ಅಡಕೆ ಗಿಡಗಳು ಒಣಗುತ್ತಿವೆ. ಬೆಳೆಗಾರರಲ್ಲಿ ಒಂದು ರೀತಿಯ ಭಯದ ವಾತಾವರಣ ನಿರ್ಮಾಣವಾಗಿದೆ. ಇಂಥ ಸಂಕಷ್ಟದ ಸಂದರ್ಭದಲ್ಲಿ ಕೃಷಿ ಬಗ್ಗೆ ಹೆಚ್ಚು ಜ್ಞಾನವುಳ್ಳವರೂ ಆಗಿರುವ ರೈತರು ಆತ್ಮಸ್ಥೈರ್ಯವನ್ನು ಕಳೆದುಕೊಳ್ಳಬಾರದು. ಕೃಷಿ ವಿವಿ ಹಾಗೂ ಕೃಷಿ ವಿಜ್ಞಾನಿಗಳು ರೈತರ ನೆರವಿಗೆ ಮುಂದಾಗಬೇಕು. ಆ ಮೂಲಕ ಸಂಶೋಧನಾ ಕೇಂದ್ರಗಳ ಕಾರ್ಯ ಮತ್ತು ನಿಮ್ಮ ಅರ್ಹತೆ ಮತ್ತು ಪ್ರಯತ್ನ ಸಮಾಜಕ್ಕೆ ತಿಳಿಯುವಂತಾಗಬೇಕು. ಕೃಷಿ ವಿಜ್ಞಾನಿಗಳು ಇಂಥ ಸಮಸ್ಯೆ ಉಲ್ಬಣಗೊಳ್ಳುವ ಮುನ್ನವೇ ಅಗತ್ಯ ಕ್ರಮ ಕೈಗೊಳ್ಳುವ ಅಗತ್ಯವಿದೆ. ಈ ಸಮಸ್ಯೆ ಬಗ್ಗೆ ಕೇಂದ್ರ ಸರ್ಕಾರದ ಗಮನವನ್ನೂ ಸೆಳೆಯುವುದಾಗಿ ತಿಳಿಸಿದರು.

ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಗೆ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಆರ್.ಸಿ. ಜಗದೀಶ್ ಮಾತನಾಡಿ. ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಪ್ರಕಾಶ್ ಮಾತನಾಡಿದರು. ಮಾಮ್ಕೋಸ್ ಉಪಾಧ್ಯಕ್ಷ ಹುಲ್ಕುಳಿ ಮಹೇಶ್, ಹಿಂದಿನಿಂದಲೂ ಕಾಣಿಸಿಕೊಳ್ಳುತ್ತಿದ್ದ ಈ ರೋಗ ಈ ವರ್ಷ ಬಹಳ ಮುಂಚಿತವಾಗಿ ವ್ಯಾಪಿಸಿದೆ. ಅಡಕೆ ಬೆಳೆಗಾರರ ಪ್ರಾತಿನಿಧಿಕ ಸಂಸ್ಥೆಯಾದ ಮಾಮ್ಕೋಸ್ ವತಿಯಿಂದ ಸರ್ಕಾರದ ಗಮನವನ್ನು ಸೆಳೆಯಲಾಗಿದೆ ಎಂದರು.

ಹಿರಿಯ ರೈತ ಡಾಕಪ್ಪ ಹೆಗ್ಡೆ, ತಾಲೂಕು ಎಪಿಎಂಸಿ ಮಾಜಿ ಅದ್ಯಕ್ಷ ಹಸಿರುಮನೆ ಮಹಾಬಲೇಶ್ ಆಗುಂಬೆ ಗ್ರಾಪಂ ಸದಸ್ಯ ಶಶಾಂಕಹೆಗ್ಡೆ ಇತರರು ಕೂಡ ಸಲಹೆ ನೀಡಿದರು. ವೇದಿಕೆಯಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಜಿ.ಸಿ.ಪೂರ್ಣಿಮಾ ಇದ್ದರು.

ಹೈಸ್ಪೀಡ್ ಇಂಟರ್ನೆಟ್ ಸೌಲಭ್ಯಕ್ಕೆ ಸಾಗರ ಆಯ್ಕೆ ಅಭಿನಂದನೀಯ

ತೀರ್ಥಹಳ್ಳಿ: ಭಾರತ್ ಸಂಚಾರ ನಿಗಮವು ಹೈಸ್ಪೀಡ್ ಇಂಟರ್‌ನೆಟ್ ಸೌಲಭ್ಯವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಒದಗಿಸುವ ಸಂಬಂಧ ರೂಪಿಸಲಾಗಿರುವ ಹೊಸ ಯೋಜನೆಯನ್ನು ಪ್ರಾಯೋಗಿಕವಾಗಿ ದೇಶದ ನಾಲ್ಕು ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಆ 4 ಪ್ರದೇಶಗಳ ಪೈಕಿ ಜಿಲ್ಲೆಯ ಸಾಗರ ತಾಲೂಕು ಸಹ ಒಂದಾಗಿದೆ ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ಗುಡ್ಡೇಕೇರಿ ಹೊಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲೆ ಮಲೆನಾಡು ಭಾಗದಲ್ಲಿ ಇಂಟರ್‌ನೆಟ್ ಸೌಲಭ್ಯ ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಮನವಿಗೆಸ್ಪಂದಿಸಿರುವಹಾಗೂಪ್ರಾಯೋಗಿಕವಾಗಿ ಮಲೆನಾಡಿನ ಸಾಗರ ತಾಲೂಕನ್ನು ಆಯ್ಕೆಗೊಳಿಸಿರುವ ಕೇಂದ್ರ ಸಚಿವರಿಗೆ ಸಂಸದರು ಅಭಿನಂದನೆ ಸಲ್ಲಿಸಿದರು.

ತಮ್ಮ ಅಧಿಕಾರಾವಧಿಯಲ್ಲಿ250ಕ್ಕೂ ಹೆಚ್ಚಿನ ಟವರ್‌ಗಳನ್ನು ತಮ್ಮ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಳವಡಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇಂಟರ್‌ನೆಟ್ ಸೌಲಭ್ಯ ವಿಸ್ತರಿಸಲು ಕೇಂದ್ರ ಸರ್ಕಾರವು ಅಗತ್ಯ ಕ್ರಮ ವಹಿಸಿದೆ ಎಂದರು.

ಆರ್‌ಎಸ್‌ಎಸ್ ವಿರುದ್ಧ ಅವಾಚ್ಯ ಶಬ್ದಗಳಿಂದ ಘೋಷಣೆ: ಪ್ರಕರಣ

ಭದ್ರಾವತಿ: ಈದ್ ಮಿಲಾದ್ ಮೆರವಣಿಗೆ ವೇಳೆ ಆರ್‌ಎಸ್‌ಎಸ್ ವಿರುದ್ಧ ಅವಾಚ್ಯ ಶಬ್ದಗಳಿಂದ ಘೋಷಣೆಗಳ ಹಾಕುವ ಮೂಲಕ ಸಮಾಜದಲ್ಲಿ ಅಶಾಂತಿ ವಾತಾವರಣ ನಿರ್ಮಾಣಕ್ಕೆ ಯತ್ನಿಸಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಹಳೇ ನಗರದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಂಗಪ್ಪವೃತ್ತದಲ್ಲಿ10ರಿಂದ15 ಜನರಗುಂಪೊಂದು ಆರ್‌ಎಸ್‌ಎಸ್ ವಿರುದ್ಧ ಅವಾಚ್ಯ ಶಬ್ದಗಳಿಂದ ಘೋಷಣೆ ಹಾಕಿರುವ ವಿಡಿಯೋ 3 ದಿನ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ ಎಲ್ಲರ ಗಮನ ಸೆಳೆದಿತ್ತು. ಇದೀಗ ಈ ವಿಡಿಯೋ ಸಮಾಜದಲ್ಲಿ ಅಶಾಂತಿ ಮೂಡಿಸುವ ಲಕ್ಷಣಗಳು ಕಂಡುಬರುತ್ತಿದೆ. ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಹಿಂದೂಪರ ಸಂಘಟನೆ ಕಾರ್ಯಕರ್ತರೊಬ್ಬರು ಪ್ರಕರಣ ದಾಖಲಿಸಿದ್ದಾರೆ.

ವಿಐಎಸ್ಎಲ್ ಕಾರ್ಖಾನೆ ಅಭಿವೃದ್ಧಿಗೆ ಸಕಲ ಪ್ರಯತ್ನ

ಹೆಚ್ಚಿನ ಬಂಡವಾಳ ಹೂಡಲು ಕೇಂದ್ರಕ್ಕೆ ಒತ್ತಾಯ: ಸಂಸದ ಬಿ.ವೈ.ರಾಘವೇಂದ್ರ ಭರವಸೆ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ದೇಶದ ಪ್ರಥಮ ಸಾರ್ವಜನಿಕ ಉದ್ಯಮವೆಂಬ ಹೆಗ್ಗಳಿಕೆ ಗಳಿಸಿರುವ ವಿಐಎಸ್ಎಲ್ ಕಾರ್ಖಾನೆ ಖಾಸಗೀಕರಣಗೊಳಿಸುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಕೈ ಬಿಟ್ಟಿದೆ. ಕಾರ್ಖಾನೆ ಅಭಿವೃದ್ಧಿಗೆ ಹೆಚ್ಚಿನ ಬಂಡವಾಳ ಹೂಡಲು ಕೇಂದ್ರ ಸಚಿವರನ್ನು ಒತ್ತಾಯಿಸಲಾಗುವುದು ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಷ್ಟದಲ್ಲಿದ್ದ ಕಾರ್ಖಾನೆಯನ್ನು ಬಂಡವಾಳ ತೊಡಗಿಸಿ ಅಭಿವೃದ್ಧಿಗೆ ಪ್ರಯತ್ನಿಸಲಾಗುತ್ತಿತ್ತು. 3 ಬಾರಿ ಕೇಂದ್ರ ಸಚಿವರನ್ನು ಕಾರ್ಖಾನೆಗೆ ಭೇಟಿ ಮಾಡಿಸಿದ್ದರೂ ಅಭಿವೃದ್ಧಿ ಆಗಿರಲಿಲ್ಲ. ಅಧಿಕಾರಿಗಳು ಕಾರ್ಖಾನೆ ಬಗ್ಗೆ ತಪ್ಪು ಮಾಹಿತಿ ನೀಡಿ ಜನ ಪ್ರತಿನಿಧಿಗಳನ್ನು ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ಖಾಸಗಿಯವರು ಕಾರ್ಖಾನೆ ಕೊಳ್ಳಲು ಮುಂದೆ ಬಾರದ ಹಿನ್ನೆಲೆ ಖಾಸಗೀಕರಣ ಪ್ರಕ್ರಿಯೆ ಕೇಂದ್ರ ಸರ್ಕಾರ ಹಿಂಪಡೆದಿದೆ ಎಂದು ತಿಳಿಸಿದರು.

ಕಾರ್ಖಾನೆಗೆ ಬಂಡವಾಳ ತೊಡಗಿಸಲು ಸಾಕಷ್ಟು ಬಾರಿ ಪ್ರಯತ್ನ ನಡೆದು ಕೇಂದ್ರ ಸಚಿವರು ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಬಂಡವಾಳ ತೊಡಗಿಸಲು ಯತ್ನಿಸಲಾಗಿತ್ತು. ಆದರೆ, ಈಗ ಕೇಂದ್ರ ಸರ್ಕಾರ ಖಾಸಗೀಕರಣ ಪ್ರಕ್ರಿಯೆಯನ್ನು ಹಿಂಪಡೆದಿದ್ದು, ಎಲ್ಲರೂ ಸೇರಿ ಮುಂದಿನ ದಿನಗಳಲ್ಲಿ ಕಾರ್ಖಾನೆಯ ಅಭಿವೃದ್ಧಿಗೆ ಚರ್ಚಿಸಿ ಉಳಿಸಿ ಬೆಳೆಸುವ ಪ್ರಯತ್ನ ಮಾಡಲಾಗುವುದುಮ ಕಾರ್ಖಾನೆ ಯಶಸ್ವಿ ದಿಕ್ಕಿನತ್ತ ಕೊಂಡೊಯ್ಯಲಾಗುವುದು ಎಂದು ಭರವಸೆ ನೀಡಿದರು.

ಕಾರ್ಖಾನೆ ಕಾರ್ಮಿಕರ ಸಂಘದ ಅಧ್ಯಕ್ಷ ಜಿ. ಜಗದೀಶ್, ಹಲವಾರು ವರ್ಷಗಳಿಂದ ವಾರ್ಷಿಕ ₹100 ಕೋಟಿ ನಷ್ಟ ಅನುಭವಿಸುತ್ತಿದ್ದ ಕಾರ್ಖಾನೆ ಇತ್ತೀಚಿನವರ್ಷಗಳಲ್ಲಿಕಾರ್ಮಿಕರಪ್ರಯತ್ನದಿಂದಾಗಿ ನಷ್ಟ ₹35 ಕೋಟಿಗೆ ತಲುಪಿದೆ ಎಂದರು.

ಮೇಯರ್ ಸುನಿತಾ ಅಣ್ಣಪ್ಪ, ಕಾರ್ಖಾನೆ ಕಾರ್ಮಿಕರ ಸಂಘದ ಪದಾಧಿಕಾರಿ ಬಿ.ಸಿ. ಶೈಲಶ್ರೀ, ಯು.ಎ. ಬಸಂತಕುಮಾರ್, ಕೆ.ಆರ್. ಮನು, ಎಸ್.ಮೋಹನ್, ಸದಸ್ಯ ಕೆ.ಎಂ. ಮಂಜುನಾಥ್, ಪಿ.ಕುಮಾರಸ್ವಾಮಿ, ಡಿ.ಸುನೀಲ್‌ಕುಮಾರ್ ಇದ್ದರು.

ICICI Home Finance

ಕಾರ್ಪೊರೇಟ್ ಕಛೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಹೆಚ್‌ಎಫ್‌ಸಿ ಟವರ್, ಅಂಧೇರಿ - ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ - 400059, ಭಾರತ
ಶಾಖಾ ಕಚೇರಿ: 1ನೇ ಮಹಡಿ, ಸಂ. 159/20, ಸುಧಾ ಕಾಂಪ್ಲೆಕ್ಸ್, ಅಟ್ಲಾಸ್ ರಸ್ತೆ, ಸುಭಾಷ್ ಚೌಕ್ ಹತ್ತಿರ, ಸೋನಿಪತ್- 131001.
ಶಾಖಾ ಕಛೇರಿ: 2ನೇ ಮಹಡಿ, ಆರ್‌ಡಿ ಬಡ್ಡಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲೆ, ಧಾರವಾಡ ಹುಬ್ಬಳ್ಳಿ 123, ಡಿ ಕ್ಲಬ್ ರಸ್ತೆ, ಹುಬ್ಬಳ್ಳಿ - 580029

[ನಿಯಮ 8(6)ಕ್ಕೆ ಪ್ರೊವಿಸೊ ಗಳನ್ನು ನೋಡಿರಿ]

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6)ಕ್ಕೆ ಪ್ರಾವಿಸೋಗಳ ಜೊತೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಸ್ಥಿರ ಆಸ್ತಿ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

ಸಾಲಗಾರ(ರಿ)ನಿಗೆ ಮತ್ತು ಜಾಮೀನುದಾರ(ರಿ)ನಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕವಾಗಿ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೆ ಭದ್ರತಾ ಸಾಲಿಗರು ಬ್ಯಾಂಕಿಗೆ ಸ್ವಾಧೀನಕ್ಕಾಗಿ ನೀಡಿರುವ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಗಳು ಸ್ವಾಧೀನಪಡಿಸಿಕೊಂಡಿದ್ದು ಇವುಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಿದ್ದಾರೆ. ಸಂಕ್ಷಿಪ್ತ ವಿವರಣೆಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ	ಸಾಲಗಾರನ(ರು)ಗಳ/ ಸಹ ಸಾಲಗಾರನ(ರ)/ ಜಾಮೀನುದಾರನ(ರ)ಹೆಸರು ಸಾಲದ ಖಾತಾ ಸಂ.	ಭದ್ರತಾ ಆಸ್ತಿಯ ವಿವರಗಳು ತಿಳಿದಿರುವ ಋಣ ಬಾಧ್ಯತೆಗಳೊಂದಿಗೆ ಏನಾದರೂ ಇದ್ದಲ್ಲಿ	ಬಾಕಿಯಾಗಿರುವ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಹಣ ಠೇವಣಿ	ಆಸ್ತಿಯ ಪರಿಶೀಲಿಸಬಹುದಾದ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಹಾಗೂ ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಚಂದ್ರಶೇಖರ ಪಾಟೀಲ (ಸಾಲಗಾರ) ಸುಮಾ ಬಿ ಬಿ (ಸಹ ಸಾಲಗಾರ) ಸಾಲದ ಖಾತೆ ಸಂಖ್ಯೆ. LHSGA00001296541	ಸೈಟ್ ನಂ. 36 ಆಸ್ತಿ ಸಂಖ್ಯೆ. 6614 ಕೆಇಬಿ ರಸ್ತೆ ಹಿರೋ ಶೋರೂಮ್ ಹಿಂಭಾಗ, ಗೋವಿನಕೋವಿ 2 ನೇ ವಾರ್ಡ್ ಹೊನ್ನಾಳಿ ಟಕ್ಯೂ ದಾವಣಗೆರೆ ಜಿಲ್ಲೆ- 577217	ರೂ. 16,99,093/- 6ನೇ ಅಕ್ಟೋಬರ್ 2022	ರೂ. 6,99,840/- ರೂ. 69,984/-	21ನೇ ಅಕ್ಟೋಬರ್ 2022 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 03:00 ರವರೆಗೆ	31ನೇ ಅಕ್ಟೋಬರ್ 2022 ರಂದು ಮಧ್ಯಾಹ್ನ 02:00 ರಿಂದ ಮಧ್ಯಾಹ್ನ 03:00 ರವರೆಗೆ
2.	ಚಂದ್ರಶೇಖರ ಪಾಟೀಲ (ಸಾಲಗಾರ) ಸುಮಾ ಬಿ ಬಿ (ಸಹ ಸಾಲಗಾರ) ಸಾಲದ ಖಾತೆ ಸಂಖ್ಯೆ. LHSGA00001298199	ಸೈಟ್ ನಂ. 38, ಸಂಖ್ಯೆ. 6614 ಕೆಇಬಿ ರಸ್ತೆ, ಹೀರೋ ಶೋರೂಮ್ ಹಿಂದೆ ಗೋವಿನಕೋವಿ 2 ನೇ ವಾರ್ಡ್, ಹೊನ್ನಾಳಿ ಟಿ ಕ್ಯೂ ದಾವಣಗೆರೆ ಜಿಲ್ಲೆ- 577217	ರೂ. 16,96,883/- 6ನೇ ಅಕ್ಟೋಬರ್ 2022	ರೂ. 6,99,840/- ರೂ. 69,984/-	21ನೇ ಅಕ್ಟೋಬರ್ 2022 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 03:00 ರವರೆಗೆ	31ನೇ ಅಕ್ಟೋಬರ್ 2022 ರಂದು ಮಧ್ಯಾಹ್ನ 02:00 ರಿಂದ ಮಧ್ಯಾಹ್ನ 03:00 ರವರೆಗೆ
3.	ಶ್ಯಾಮನಾರಾಯಣ ಬಿಠಾರ್ (ಸಾಲಗಾರ) ಲೀಲಾ ಕೆ (ಸಹ ಸಾಲಗಾರ) ಸಾಲದ ಖಾತೆ ಸಂಖ್ಯೆ. LHSGA00001284809	ನಿವೇಶನ ಸಂ. ಎಂಐಜಿ 39, ಕೆಹೆಚ್‌ಬಿ ಬಡಾವಣೆ, ಪ್ರಾಜ್ಞ ಸೆಂಟ್ರಲ್ ಸ್ಕೂಲ್ ಹತ್ತಿರ, ಕಡೂರು, ಬೆಂಗಳೂರು ರಸ್ತೆ, ಚಿಕ್ಕಮಗಳೂರು ಜಿಲ್ಲೆ- 577548.	ರೂ. 5,30,232/- 6ನೇ ಅಕ್ಟೋಬರ್ 2022	ರೂ. 8,89,330/- ರೂ. 88,933/-	21ನೇ ಅಕ್ಟೋಬರ್ 2022 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 03:00 ರವರೆಗೆ	31ನೇ ಅಕ್ಟೋಬರ್ 2022 ರಂದು ಮಧ್ಯಾಹ್ನ 02:00 ರಿಂದ ಮಧ್ಯಾಹ್ನ 03:00 ರವರೆಗೆ

ಮೇಲೆ ವಿವರಿಸಲಾದ ಭದ್ರತಾ ಆಸ್ತಿಗಳ ಹರಾಜು ಮಾರಾಟವು ಹರಾಜಿನ ಏಜೆನ್ಸಿಯವರಾದ ಆ್ಯಕ್ಷನ್ ಟೈಗರ್ ಮೂಲಕ (URL Link-https://sarfaesi.auctiontiger.net/EPROC/) ಎಂಬುದರ ಮೇಲೆ ನಡೆಯುತ್ತದೆ. ಅಡಮಾನದಾರರಿಗೆ/ ನೋಟೀಸರವರಿಗೆ ಅವರ ಒಟ್ಟು ಬಾಕಿ ಸಾಲ ಮತ್ತು ತದನಂತರದ ಬಡ್ಡಿಯನ್ನು ಹರಾಜಿನ ದಿನಾಂಕ 28ನೇ ಅಕ್ಟೋಬರ್, 2022ರ ಸಾಯಂಕಾಲ 5.00ರೊಳಗಾಗಿ ಮರುಪಾವತಿ ಮಾಡಲು ಕೊನೆಯ ಅವಕಾಶ ನೀಡಲಾಗಿದೆ ಇಲ್ಲವಾದಲ್ಲಿ ಈ ಭದ್ರತಾ ಆಸ್ತಿಯನ್ನು(ಗಳನ್ನು) ಕಾರ್ಯಸೂಚಿಯಂತೆ ಮಾರಾಟ ಮಾಡಲಾಗುತ್ತದೆ.

ಭಾವಿ ಬಿಡ್‌ದಾರ(ರು) ಮೇಲೆ ತಿಳಿಸಿದ ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ಆರ್‌ಟಿಜಿಎಸ್/ ಡಿಮಾಂಡ್ ಡ್ರಾಫ್ಟ್ (ಡಿಡಿ)(ಕಾಲಂ ಸಂಖ್ಯೆ ಇ ರಲ್ಲಿ ನಮೂದಿಸಿದಂತೆ) ಯೊಂದಿಗೆ ಸಲ್ಲಿಸಬೇಕು. ದಯವಿಟ್ಟು ಗಮನಿಸಬೇಕಾದುದೇನೆಂದರೆ ಮೇಲೆ ತಿಳಿಸಿದ ರೀತಿಯಲ್ಲಿ ನಿರ್ದಿಷ್ಟ ಸಮಯದಲ್ಲಿ ಸಲ್ಲಿಸಲು ಆಗದಿದ್ದಲ್ಲಿ ಸಹಿ ಮಾಡಿದ ಟೆಂಡರ್ ದಾಖಲೆಗಳನ್ನು ಐಸಿಐಸಿಐ ಹೋಂ ಫೈನಾನ್ಸ್ ಕಂಪನಿ ಲಿಮಿಟೆಡ್, 2 ನೇ ಮಹಡಿ, ಆರ್.ಡಿ ಬಡ್ಡಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲೆ, ಧಾರವಾಡ ಹುಬ್ಬಳ್ಳಿ 123, ಡಿ ಕ್ಲಬ್ ರಸ್ತೆ, ಹುಬ್ಬಳ್ಳಿ - 580029 ಇವರಿಗೆ 28ನೇ ಅಕ್ಟೋಬರ್, 2022ರ ಸಂಜೆ 04.00 ಗಂಟೆಯೊಳಗಾಗಿ ಅಥವಾ ಮುಂಚಿತವಾಗಿ ಸಲ್ಲಿಸಬೇಕು. ಅರ್ನೆಸ್ಟ್ ಮನಿ ಡಿಪಾಸಿಟ್, ಐಸಿಐಸಿಐ ಬ್ಯಾಂಕ್ ಲಿಮಿಟೆಡ್, 2 ನೇ ಮಹಡಿ, ಆರ್.ಡಿ ಬಡ್ಡಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲೆ, ಧಾರವಾಡ ಹುಬ್ಬಳ್ಳಿ 123, ಡಿ ಕ್ಲಬ್ ರಸ್ತೆ, ಹುಬ್ಬಳ್ಳಿ- 580029 ಇವರಿಗೆ 28ನೇ ಅಕ್ಟೋಬರ್, 2022ರ ಸಂಜೆ 05.0 ಗಂಟೆಯೊಳಗೆ ಸಲ್ಲಿಸಬೇಕು. ಅರ್ನೆಸ್ಟ್ ಮನಿ ಡೆಪಾಸಿಟ್ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ''ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್- ಹರಾಜು'' ಇದರ ಪರವಾಗಿ ದಾವಣಗೆರೆ, ಚಿಕ್ಕಮಗಳೂರು ಇಲ್ಲಿಗೆ ಪಾವತಿಸಬೇಕು.

ಪರಿಶೀಲನೆ, ಹರಾಜು ಅಥವಾ ಟೆಂಡರ್‌ಗಳ ಸಲ್ಲಿಕೆಯ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಅನ್ನು 7021072869 ನಲ್ಲಿ ಸಂಪರ್ಕಿಸಿ.

ಯಾವುದೇ ಹೆಚ್ಚಿನ ಕಾರಣಗಳನ್ನು ಒದಗಿಸದೆಯೇ ಯಾವುದೇ ಅಥವಾ ಎಲ್ಲಾ ಬಿಡ್ಡಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿಕೊಂಡಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು https://www.icicihfc.com/ ಗೆ ಭೇಟಿ ನೀಡಿ

ದಿನಾಂಕ : ಅಕ್ಟೋಬರ್ 16, 2022
ಸ್ಥಳ : ದಾವಣಗೆರೆ, ಚಿಕ್ಕಮಗಳೂರು

ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

ಮಾನ್ಯ 1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ ಶಿಕಾರಿಪುರ
ಓ.ಎಸ್.ನಂ.182/2020

ವಾದಿ: 1. ಬಸವರಾಜಪ್ಪ ಬಿನ್ ಲೇಟ್ ಮಲ್ಲಪ್ಪ ಸುಮಾರು ವಯಸ್ಸು 55 ವರ್ಷಗಳು ವ್ಯವಸಾಯ ಕೆಲಸ, 2. ತಾರಕೇಶ್ವರಮೂರ್ತಿ ಯು ಬಿನ್ ಲೇಟ್ ಶಿವಪ್ಪ ಸುಮಾರು ವಯಸ್ಸು 45 ವರ್ಷಗಳು ವ್ಯವಸಾಯ ಕೆಲಸ
ವಾದಿ 1 ಮತ್ತು 2 ರವರ ವಾಸ ಬೇಗೂರು ಗ್ರಾಮ ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ವಿರುದ್ಧ

ಪ್ರತಿವಾದಿಯರು: 1 ಚನ್ನಪ್ಪ ಮತ್ತು ಇತರೆ 6 ಜನರು 2 ಶ್ರೀಮತಿ ಆಶಾ ಹೆಚ್.ಎಸ್. ಕೋಂ ಹೆಚ್.ಎಮ್ ಶಿವಕುಮಾರ್ ಸುಮಾರು ವಯಸ್ಸು 50 ವರ್ಷಗಳು 3. ಹೆಚ್.ಎಮ್. ಶಿವಪ್ರಕಾಶ ಬಿನ್ ಮಹಾದೇವಪ್ಪ ಸುಮಾರು ವಯಸ್ಸು 55 ವರ್ಷಗಳು 4. ಶ್ರೀಮತಿ ಟಿ.ಎಸ್. ಅನ್ನಪೂರ್ಣ ದಾ/ಆಫ್ ಮಹಾದೇವಪ್ಪ ಸುಮಾರು ವಯಸ್ಸು 48 ವರ್ಷಗಳು.
ಪ್ರತಿವಾದಿ 2 ರಿಂದ 4 ರವರ ವಾಸ 202, 3ನೇ ಡಿ ಕ್ರಾಸ್, 2ನೇ ಮೇನ್ ರಸ್ತೆ ಹೆಚ್‌ಆರ್‌ಬಿಆರ್ 3ನೇ ಕ್ರಾಸ್ ಕಲ್ಯಾಣ ನಗರ ಸಿ ಎಮ್ ಆರ್ ನ್ಯಾಷನಲ್ ಸ್ಕೂಲ್, ಬೆಂಗಳೂರು ನಾರ್ಥ, ಬೆಂಗಳೂರು.
5. ಶ್ರೀಮತಿ ನೀಲಮ್ಮ ದಾ/ಆಫ್ ಮಹಾದೇವಪ್ಪ ಸುಮಾರು ವಯಸ್ಸು 54 ವರ್ಷಗಳು, 6.ಶ್ರೀಮತಿ ಚನ್ನಮ್ಮ ದಾ/ಆಫ್ ಮಹಾದೇವಪ್ಪ ಸುಮಾರು ವಯಸ್ಸು 50 ವರ್ಷಗಳು. 7.ಹೆಚ್.ಎಸ್. ಕುಶಾಲ್ ಬಿನ್ ಹೆಚ್.ಎಮ್. ಶಿವಪ್ರಸಾದ್ ಸುಮಾರು ವಯಸ್ಸು 28 ವರ್ಷಗಳು
ಪ್ರತಿವಾದಿ 5 ರಿಂದ 7 ರವರ ವಾಸ ಸವುಲೆ ಗ್ರಾಮ, ಸವಳಂಗ ರಸ್ತೆ ಶಿವಮೊಗ್ಗ, ಶಿವಮೊಗ್ಗ ಜಿಲ್ಲೆ'
(2 ರಿಂದ 7ನೇ ಪ್ರತಿವಾದಿಯರಿಗೆ ಮಾತ್ರ)

ನೋಟೀಸು

ಈ ಮೇಲ್ಕಂಡ ದಾವೆಯಲ್ಲಿ ವಾದಿಯರು ಓ.ಎಸ್. ನಂ. 182/2020 ರಲ್ಲಿ ದಾವಾ ಶಡ್ಯೂಲ್ ಆದ ಶಿಕಾರಿಪುರ ತಾಲೂಕು ಬೇಗೂರು ಗ್ರಾಮದ ಸರ್ವೆ ನಂ. 18/1, 18/2, 18/3 ರ ಸ್ವತ್ತಿಗೆ ಸಂಬಂಧಿಸಿದಂತೆ ಖಾಯಂ ತಡೆಯಾಜ್ಞೆ ಕೋರಿ ಪ್ರತಿವಾದಿಯರ ವಿರುದ್ಧ ಮೇಲ್ಕಂಡ ಮಾನ್ಯ ನ್ಯಾಯಾಲಯದಲ್ಲಿ ದಾವೆಯನ್ನು ಹಾಕಿದ್ದು, ಅದರ ಮುದ್ದತ್ತು ದಿನಾಂಕ : 8-11-2022 ರಂದು ಇರುತ್ತದೆ. 2 ರಿಂದ 7ನೇ ಪ್ರತಿವಾದಿಯರಾದ ಶ್ರೀಮತಿ ಆಶಾ ಹೆಚ್.ಎಸ್. ಕೋಂ ಹೆಚ್.ಎಮ್. ಶಿವಕುಮಾರ್, ಹೆಚ್.ಎಮ್. ಶಿವಪ್ರಕಾಶ ಬಿನ್ ಮಹಾದೇವಪ್ಪ, ಶ್ರೀಮತಿ ಟಿ.ಎಸ್. ಅನ್ನಪೂರ್ಣ ದಾ/ಆಫ್ ಮಹಾದೇವಪ್ಪ, ಶ್ರೀಮತಿ ನೀಲಮ್ಮ (ದಾ/ಆಫ್ ಮಹಾದೇವಪ್ಪ, ಶ್ರೀಮತಿ ಚನ್ನಮ್ಮ ದಾ/ಆಫ್ ಮಹಾದೇವಪ್ಪ, ಹೆಚ್.ಎಸ್. ಕುಶಾಲ್ ಬಿನ್ ಹೆಚ್.ಎಮ್. ಶಿವಪ್ರಸಾದ್ ಆದ ಇವರು ಮುದ್ದತ್ತಿನ ದಿನದ ಬೆಳಗ್ಗೆ 11 ಘಂಟೆಗೆ ಸರಿಯಾಗಿ ಮಾನ್ಯ ನ್ಯಾಯಾಲಯಕ್ಕೆ ಖುದ್ದು ನಿವಾಗಲಿ ಅಥವಾ ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗಿ, ನಿಮ್ಮ ಪರವಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ವಾದಿಯವರು ಹಾಕಿದ ಮೇಲ್ಕಂಡ ದಾವೆಯನ್ನು ಏಕಪಕ್ಷೀಯಾಗಿ ವಿಚಾರಣೆ ಮಾಡಿ ತೀರ್ಮಾನಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/- ಶಿರಸ್ತೇದಾರರು
ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಶಿಕಾರಿಪುರ

ಸಹಿ/- ಹೆಚ್.ಪಿ.ಜಗದೀಶ್
ವಾದಿಯ ಪರ ವಕೀಲರು
ಶಿಕಾರಿಪುರ, ದಿನಾಂಕ: 12-10-2022

ಎಚ್ಚರಿಕೆ-ಈ ಅಂಕಣಗಳಲ್ಲಿ ಜಾಹೀರಾತುಗಳಿಗೆ ಪ್ರತಿಸ್ಪಂದಿಸುವಾಗ ಸಮುಚಿತ ರೀತಿಯಲ್ಲಿ ವಿಚಾರಿಸುವಂತೆ ವಾಚಕರಿಗೆ ಸಲಹೆ ಕೊಡಲಾಗಿದೆ. ಕನ್ನಡಪ್ರಭ ಪಬ್ಲಿಕೇಷನ್ಸ್ ಲಿಮಿಟೆಡ್ ಜಾಹೀರಾತುದಾರರಿಂದ ಮಾಡಲಾದ ಯಾವುದೇ ಕ್ಲೇಮುಗಳಿಗೆ ಹೊಣೆಯಾಗಿರುವುದಿಲ್ಲ. ಮುದ್ರಕ, ಪ್ರಕಾಶಕ, ಸಂಪಾದಕ ಮತ್ತು ಮಾಲೀಕರು ಕನ್ನಡಪ್ರಭ ಪಬ್ಲಿಕೇಷನ್ಸ್ ಲಿಮಿಟೆಡ್ ಇವರು ಅಂತಹ ಕ್ಲೇಮುಗಳು ಅಸತ್ಯವೆಂದು ಕಂಡುಬಂದಲ್ಲಿ ಯಾವುದೇ ಪರಿಣಾಮಗಳಿಗೆ ಜವಾಬ್ದಾರಿ/ಹೊಣೆಯಾಗಿರತಕ್ಕುದಲ್ಲ. ಕನ್ನಡಪ್ರಭ


WORLD INVESTOR WEEK
OICU-IOSCO
WORLD INVESTOR WEEK 2022
भारतीय प्रतिभूति और विनिमय बोर्ड Securities and Exchange Board of India
AMFI Association of Mutual Funds in India
ರಿಸ್ಕ್ ಅರಿತುಕೊಳ್ಳಿರಿ.
ಡೈವರ್ಸಿಫೈ ಮಾಡಿರಿ.
ಗುರಿಗಳ ಮೇಲೆ ಫೋಕಸ್ಡ್ ಆಗಿರಿ
ಮತ್ತು ದೀರ್ಘಕಾಲಕ್ಕಾಗಿ ಹೂಡಿರಿ.
#IOSCOWIW2022
#WorldInvestorWeekIndia
ಹೂಡಿಕೆದಾರನ ಚೇತರಿಕೆ-ಸಾಮರ್ಥ್ಯ: ಹಣ ಹೂಡುವ ಮೊದಲು, ಜಾಣ ಹೂಡಿಕೆದಾರ ಯೋಗ್ಯ ಪರಿಶೀಲನೆ ನಡೆಸುತ್ತಾನೆ ಮತ್ತು ತನ್ನ ಧನವನ್ನು ಒಂದೇ ಕಡೆ ಹೂಡುವುದಿಲ್ಲ.
mutualfundssahihai.com ನ್ನು ಸಂದರ್ಶಿಸಿ Mutual Funds Sahi Hai ಯನ್ನು ಇಲ್ಲಿ ಫಾಲೋ ಮಾಡಿ:
ಮ್ಯೂಚುವಲ್ ಫಂಡ್ ಹೂಡಿಕೆಗಳು ಮಾರುಕಟ್ಟೆಯ ಅಪಾಯಗಳಿಗೆ ಅಧೀನವಾಗಿವೆ; ಸ್ಕೀಮ್ ಸಂಬಂಧಿತ ಎಲ್ಲ ದಸ್ತಾವೇಜುಗಳನ್ನು ಗಮನವಿಟ್ಟು ಓದಿಕೊಳ್ಳಿ.
MUTUAL FUNDS
ಸರಿ ಇದೆ